# ಅಂದಿನ ಪಾಠ ಅಂದೇ ಕಲಿಕೆ

**ಮೇದಾ ಪಿ. ಶೆಟ್ಟಿ**

**ಎಸ್ಎಸ್ಎಲ್‌ಸಿಯಲ್ಲಿ 624 ಅಂಕಗಳು, ಇಂಗ್ಲಿಷ್ ಮಾಧ್ಯಮ, ಎರಡನೇ ಸ್ಥಾನ. ಹೋಲಿ ಚೈಲ್ಡ್ ಇಂಗ್ಲಿಷ್ ಸ್ಕೂಲ್, ಬೆಂಗಳೂರು**



ಮೂಲತಃ ನಾನು ಉಡುಪಿಯವಳು, ಬೆಂಗಳೂರಿನಲ್ಲಿ ನೆಲೆಸಿದ್ದೇವೆ. ನಾನು ಟಾಪರ್ ಆಗಲೇಬೇಕು ಎಂದು ನಿರ್ಧರಿಸಿದ್ದೆ, ಆಗುತ್ತೇನೆ ಎನ್ನುವುದು ಗೊತ್ತಿತ್ತು. ಸಂಸ್ಕೃತದಲ್ಲಿ ಒಂದು ಅಂಕ ಹೇಗೆ ಮಿಸ್ ಆಗಿದೆ ಎಂದು ಗೊತ್ತಾಗುತ್ತಿಲ್ಲ. ಮರು ಮೌಲ್ಯಮಾಪನಕ್ಕೆ ಹಾಕುತ್ತಿದ್ದೇನೆ.

10ನೇ ತರಗತಿ ಆರಂಭವಾದ ದಿನದಿಂದಲೂ ಅಂದಿನ ಪಾಠ ಅಂದೇ ಓದುತ್ತಿದ್ದೆ. ಟೆಸ್ಟ್ ಸಮಯದಲ್ಲಿ ಪುನರಾವರ್ತನೆಯನ್ನು ಪಟ್ಟು ಹಿಡಿದು ಮಾಡುತ್ತಿದ್ದೆ. ಅದಕ್ಕೆ ಸಮಯ ನಿಗದಿ ಮಾಡುತ್ತಿರಲಿಲ್ಲ. ಆದರೆ ಮುಗಿಯುವ ತನಕ ಏಳುತ್ತಿರಲಿಲ್ಲ. ಖಾಸಗಿ ಟ್ಯೂಷನ್ ಕೂಡ ತೆಗೆದುಕೊಂಡಿದ್ದೆ.

ಶಾಲೆಯಲ್ಲಿ ನೋಟ್ಸ್ ಮತ್ತು ಮುಖ್ಯಾಂಶಗಳನ್ನು ನೀಡುತ್ತಿದ್ದರು. ಅಭ್ಯಾಸಕ್ಕೆ ಮಾದರಿ ಪ್ರಶ್ನೆಪತ್ರಿಕೆಯನ್ನು ನಮ್ಮ ಶಾಲೆಯಲ್ಲಿ ಕೊಡುತ್ತಿದ್ದರು. ಆ ಪ್ರಶ್ನೆಗಳನ್ನು ಬಿಡಿಸುತ್ತಿದ್ದೆ. ನಮ್ಮ ಹಿರಿಯ ಸ್ನೇಹಿತರಿಗೂ ಇದು ಸಹಾಯ ಆಗಿತ್ತು ಎಂದು ಗೊತ್ತಿತ್ತು. ಅದನ್ನು ನಾನೂ ಅನುಸರಿಸುತ್ತಿದ್ದೆ.

ಮೊದಲಿನಿಂದಲೇ ಗುರಿ ಇಟ್ಟುಕೊಂಡು ನಿರಂತರ ಅಭ್ಯಾಸವನ್ನು ಮಾಡಬೇಕು. ಮಧ್ಯದಲ್ಲಿ ಪರೀಕ್ಷೆಗೆ ಸಿದ್ಧವಾಗಬೇಕು ಎಂಬ ಗಂಭೀರವಾಗುವ ಅಗತ್ಯ ಇಲ್ಲ. ಮೊದಲಿನಿಂದಲೇ ಅದನ್ನು ರೂಢಿಸಿಕೊಂಡರೆ ಆತಂಕವೂ ಇರಲ್ಲ. ಸುಲಭವಾಗುತ್ತದೆ.

ಬೇಜಾರಾದಾಗ ಸೈಕಲ್ ಓಡಿಸುತ್ತಿದ್ದೆ. ಹೊರಗಡೆ ಸುತ್ತಾಡುತ್ತಿದ್ದೆ. ಅಮ್ಮನ ಜೊತೆ ಕುಳಿತು ಮಾತನಾಡುತ್ತಿದ್ದೆ. ಡಾಕ್ಟರ್ ಆಗಬೇಕು ಎನ್ನುವುದು ನನ್ನ ಕನಸು. 'ನೀಟ್'ಗೆ ಸಿದ್ಧತೆ ಮಾಡುತ್ತಿದ್ದೇನೆ.

ಅಪ್ಪ ಪ್ರಭಾಕರ್ ಶೆಟ್ಟಿ, ಹೋಟೆಲ್ ಉದ್ಯಮಿ. ಅಮ್ಮ ಉಮಾ ಶೆಟ್ಟಿ, ಗೃಹಿಣಿ.

# ನಿದ್ದೆಗೆಟ್ಟಿಲ್ಲ, ಶ್ರದ್ಧೆ ಮರೆತಿಲ್ಲ

**ವೇದಾಂತ ಜ್ಞಾನೋಬಾ ನಾವಿ**

**ಕಲಾ ವಿಭಾಗ ರಾಜ್ಯಕ್ಕೆ ಮೊದಲ ಸ್ಥಾನ (596 ಅಂಕ), ಕನ್ನಡ ಮಾಧ್ಯಮ, ಎಸ್ಎಸ್ ಪದವಿಪೂರ್ವ ಕಾಲೇಜು, ವಿಜಯಪುರ**



ಅಪ್ಪ ಕ್ಷೌರಿಕ ಕೆಲಸ ಮಾಡುತ್ತಿದ್ದರು. ಕೋವಿಡ್ ಸಮಯದಲ್ಲಿ ತೀರಿಕೊಂಡರು. ಆನಂತರ ನಮಗೆ ತುಂಬ ಸಂಕಷ್ಟ ಎದುರಾಯಿತು. ಅಮ್ಮನ ಕೂಲಿ ದುಡಿಮೆಯೇ ಜೀವನಾಧಾರ ಆಗಿತ್ತು. ಊರಿನ ಜನರ ಸಹಕಾರದಿಂದ ನಮಗೆ ಬದುಕಲು ಸಾಧ್ಯವಾಗಿದೆ. ಊರ ದೇವರ ಭಜನಾಮಂಡಳಿಯಲ್ಲಿ ನಾನೂ ಇದ್ದೇನೆ. ಆಗಾಗ ಭಜನಾ ಮೇಳದ ಜೊತೆ ಹಾಡುತ್ತಿದ್ದೆ. ಮೃದಂಗವನ್ನು ನುಡಿಸುತ್ತೇನೆ.

ತರಗತಿಯಲ್ಲಿ ಗಮನ ಇಟ್ಟು ಪಾಠವನ್ನು ಕೇಳಿಕೊಳ್ಳುತ್ತಿದ್ದೆ. ಓದುವಾಗ ಕೂಡ ಗಮನ ಇಟ್ಟು ಓದುತ್ತಿದ್ದೆ. ಇದೇ ನನ್ನ ಯಶಸ್ಸಿನ ಗುಟ್ಟು. ಓದಬೇಕು ಎನ್ನುವ ಒತ್ತಡದಿಂದ ಹಗಲು ರಾತ್ರಿ ನಿದ್ದೆಗೆಟ್ಟಿಲ್ಲ. ನನ್ನ ಸಂಗೀತದ ಪ್ರೀತಿ ನೆನಪಿನ ಶಕ್ತಿಯನ್ನು ವೃದ್ಧಿಸಿದೆ ಎಂದುಕೊಳ್ಳುತ್ತೇನೆ.

ಜೀವನೋಪಾಯಕ್ಕೆ ಉದ್ಯೋಗವೊಂದು ಅಗತ್ಯವಾಗಿ ಬೇಕಿದೆ. ಈಗ ಅದನ್ನು ಪಡೆಯುವ ಪ್ರಯತ್ನವೇ ನನ್ನ ಮೊದಲ ಆದ್ಯತೆ. ಕೆಲಸಕ್ಕೆ ಸೇರಿದ ಮೇಲೂ ಓದನ್ನು ನಿಲ್ಲಿಸುವುದಿಲ್ಲ. ಯುಪಿಎಸ್‌ಸಿ ಕಡೆ ಗಮನಹರಿಸಬೇಕು. ಐಎಎಸ್ ಮಾಡಲೇಬೇಕು ಎನ್ನುವುದು ನನ್ನ ಕನಸು.

ಸರ್ಕಾರದ 'ಡಿ. ದೇವರಾಜ ಅರಸು ಮೆಟ್ರಿಕ್ ನಂತರದ ಬಾಲಕರ ವಸತಿ ನಿಲಯ'ದಲ್ಲಿ ಇದ್ದು ಓದಿದೆ. ನನ್ನ ಅಧ್ಯಾಪಕರ ಮಾರ್ಗದರ್ಶನ ಈ ನನ್ನ ಯಶಸ್ಸಿಗೆ ಸಹಕಾರಿಯಾಗಿದೆ.

ಅಪ್ಪ ಜ್ಞಾನುಬ ಕೊಂಡಿಬ ನಾವಿ, ಅಮ್ಮ ಲಲಿತಾ ಜ್ಞಾನುಬ ನಾವಿ.



# ಸ್ವ ಅಧ್ಯಯನವೆಂಬ ಶಕ್ತಿಮದ್ದು

**ಸಿದ್ಧಾಂತ ನಾಯಿಕಬಾ ಗಡಗೆ**

**ಎಸ್ಎಸ್ಎಲ್‌ಸಿಯಲ್ಲಿ 624 (ಕನ್ನಡ ಮಾಧ್ಯಮ), ಎರಡನೇ ಸ್ಥಾನ, ಆಚಾರ್ಯ ಸುಬಲಸಾಗರ ಪ್ರೌಢಶಾಲೆ, ಶೇಡಬಾಳ, ಕಾಗವಾಡ ತಾಲ್ಲೂಕು**



ಪ್ರತಿ ನಿತ್ಯ 6 ಗಂಟೆ ಓದುತ್ತಿದ್ದೆ. ಸಂಜೆ 6ರಿಂದ ರಾತ್ರಿ 12ರ ತನಕ ಓದುತ್ತಿದ್ದೆ. ರಾತ್ರಿ ಓದಿದ್ದನ್ನು ಬೆಳಿಗ್ಗೆ ಒಂದು ತಾಸಿನಲ್ಲಿ ಮನನ ಮಾಡಿಕೊಳ್ಳುತ್ತಿದ್ದೆ. ಹಿಂದಿನ ವರ್ಷದ ಪ್ರಶ್ನೆ ಪತ್ರಿಕೆಗಳನ್ನು ಬಿಡಿಸುತ್ತಿದ್ದೆ.

ನಮ್ಮ ಶಾಲೆಯಲ್ಲಿ ಪರೀಕ್ಷೆಗಳನ್ನು ಆಗಾಗ ಮಾಡುತ್ತಿದ್ದರು. ಅತಿ ಹೆಚ್ಚು ಅಂಕ ಗಳಿಸುತ್ತೇನೆ ಎನ್ನುವುದು ನನಗೆ ನಿರೀಕ್ಷಿತ. ಆ ಆತ್ಮವಿಶ್ವಾಸವನ್ನು ನಮ್ಮ ಶಿಕ್ಷಕರು ನನಗೆ ತುಂಬುತ್ತಿದ್ದರು. ನಿನ್ನಿಂದ ಸಾಧ್ಯ ಎಂದು ಅವರು ಹೇಳುತ್ತಿದ್ದ ಮಾತು ನನ್ನ ಓದಿಗೆ ಹುರುಪು ಕೊಡುತ್ತಿತ್ತು.

ಶಿಕ್ಷಕರು ಪಾಠವನ್ನು ಮಾಡುವ ಮೊದಲೇ ಒಮ್ಮೆ ಓದಿರುತ್ತಿದ್ದೆ. ಅವರು ಹೇಳಿಕೊಟ್ಟ ನಂತರ ಮತ್ತೆ ಓದಿ ನನ್ನ ವೈಯಕ್ತಿಕ ನೋಟ್ಸ್ ನಾನೇ ಮಾಡುತ್ತಿದ್ದೆ. ಆಗಾಗ ಓದಿರುವ ಪಾಠದಲ್ಲಿ ಹಿಂದಿನ ವರ್ಷ ಯಾವ ರೀತಿಯ ಪ್ರಶ್ನೆಗಳು ಬಂದಿವೆ ಎನ್ನುವುದನ್ನು ಪರಿಶೀಲಿಸುತ್ತಿದ್ದೆ. ಅದನ್ನು ಬಿಡಿಸುತ್ತಿದ್ದೆ. ಬೋರ್ಡ್‌ನವರು ಪ್ರಕಟಿಸಿದ ಮಾದರಿ ಪ್ರಶ್ನೆಪತ್ರಿಕೆಯನ್ನು ನೋಡುತ್ತಿದ್ದೆ. ಪಿಯುಸಿ ಸೈನ್ಸ್ ಸೇರುತ್ತಿದ್ದೇನೆ. ಮುಂದೆ ಎಂಜಿನಿಯರಿಂಗ್ ವೃತ್ತಿ ಶಿಕ್ಷಣ ಪೂರೈಸಿ, ಯುಪಿಎಸ್‌ಸಿಗೆ ಸಿದ್ಧವಾಗಬೇಕು ಎನ್ನುವುದು ನನ್ನಾಸೆ.

ತಂದೆ ನಾಯಿಕಬಾ ಶಿವಲಿಂಗ ಗಡಗೆ, ತಾಯಿ ಮಂಗಲ್ ನಾಯಿಕಬಾ ಗಡಗೆ.

**ಪ್ರತಿಕ್ರಿಯಿಸಿ: feedback@sudha.co.in**